ಹಾಕಿಸಿದರು. ಇವನು 2 ಕೋಟಿ ರೂಪಾಯಿ ತಿಂದುಹಾಕಿದ್ದಾನೆ.

ಅಧ್ಯಕ್ಷರು: ನಿಮಗೇನು ಇಷ್ಟು ಖುಷಿ; ನಿಮಗೆ ಟೈಮ್ ಕಳೆಯುವುದು ಎಂದರೆ. ನನಗೆ ಅರ್ಥವೇ ಆಗುವುದಿಲ್ಲ. ಮಾನ್ಯ ನಾಣಯ್ಯನವರು ಇಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೈಮಾಫೇಸಿ ಕೇಸ್ ಇದ್ದ ತಕ್ಷಣ ನಮಗೆ ಅವರು ತಿಳಿಸುತ್ತಾರೆ. We will keep them under suspension.' ಎಂದು ಮತ್ತೆ ಅದರ ಮೇಲೆ ಏಕೆ ಚರ್ಚೆ? ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಲೋಕಾಯುಕ್ತಕ್ಕೆ ರೆಫರ್ ಮಾಡಿದಮೇಲೆ ನಾವು ಸಸ್ಪೆಂಡ್ ಮಾಡುವುದು ಹೇಗೆ? ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇ ಅದಕ್ಕೋಸ್ಕರ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಪಾಪ, ಇಷ್ಟೇ ಸಿಂಪಲ್ ಕೇಳಿದ್ದು. ಅವರೇನು ಕೇಳಿದರು, ಸಸ್ಪೆಂಡ್ ಮಾಡಿದ ಮೇಲೆ ಪ್ರಮೋಷನ್ ಮಾಡಿದ್ದೀರಾ? ಇಷ್ಟು ಹೇಳಿ ಎಂದು.

ಅಧ್ಯಕ್ಷರು: ಅವರು ಹೇಳಿದರಲ್ಲಾ ಅದನ್ನು, ನನಗೆ ಗೊತ್ತಿದ್ದ ಹಾಗೆ ಮಾಡಿಲ್ಲವೆಂದು. ಮಾನ್ಯ ಮಹದೇವಪ್ಪನವರೂ ಕೂಡ ಹೇಳಿದರು, ನನಗೆ ತಿಳಿದಹಾಗೆ ನಾವು ಮಾಡಿಲ್ಲ ಹಾಗೆ ಎಂದು ಹೇಳಿ ಹೇಳಿದರು. ಮಾನ್ಯ ನಾಣಯ್ಯನವರೇ, ಈಗ ಅಪ್ಪಚ್ಚುರಂಜನ್‌ರವರ ವಿಚಾರಕ್ಕೆ ತಾವು ಉತ್ತರ ಹೇಳಿಬಿಡಿ. ಪ್ರಕಟಣೆಗಳು ಇದ್ದಾವೆ.

ವಿಷಯ: ಸೋಮವಾರ ಪೇಟೆಯಲ್ಲಿ ನಡೆದಿದೆ ಎನ್ನಲಾದ ಅರಣ್ಯದ ಅವ್ಯವಹಾರ

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಅಪ್ಪಚ್ಚುರಂಜನ್‌ರವರು ಸೋಮವಾರಪೇಟೆಯಲ್ಲಿ ಸ್ವಲ್ಪಮಟ್ಟಿಗೆ ಅರಣ್ಯದ ಅವ್ಯವಹಾರ ನಡೆದಿರುವ ಬಗ್ಗೆ ವಿಚಾರ ಮಾಡಿದರು, ಮಾನ್ಯ ಮಂತ್ರಿಗಳೂ ಕೂಡ ಈ ಸಭೆಯಲ್ಲಿ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು ಎನ್ನುವ ವಿಚಾರವನ್ನು ಎತ್ತಿದರು. ಹೆಚ್ಚಿನ ಮಾಹಿತಿ ಕೂಡ ತರಿಸುತ್ತಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳ ವಿರುದ್ಧ ಇರುವ ಕೆಲವು ಆಪಾದನೆಗಳು ಯಾವುದು ಇದೆ, ಅದನ್ನು ಪುನಃ ಪರಿಶೀಲನೆ ಮಾಡಿ ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿ ಬಂದರೆ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡುತ್ತೇವೆ. ಇದಕ್ಕೆ ಹಿಂದೆಮುಂದೆ ಏನೂ ನಾವು ನೋಡುವುದಿಲ್ಲ.

(10) (i) ಪ್ರಕಟಣೆಗಳು ಹಾಗೂ ತೀರ್ಪು:

ಅಧ್ಯಕ್ಷರು: ಈಗ ಪ್ರಕಟಣೆಗಳು ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ: 12ನೇ ಸೆಪ್ಟೆಂಬರ್ 1997ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ

ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

(1) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು ತಿದ್ದುಪಡಿ ವಿಧೇಯಕ, 1997.

(2) ಕರ್ನಾಟಕ ವಿಧಾನಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ ತಿದ್ದುಪಡಿ ವಿಧೇಯಕ 1997.

(3) ಕರ್ನಾಟಕ ತೆರಿಗೆ ಕಾನೂನುಗಳ 2ನೇ ತಿದ್ದುಪಡಿ ವಿಧೇಯಕ, 1997.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ:

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 12ನೇ ಸೆಪ್ಟೆಂಬರ್, 1997 ರಂದು ಕರ್ನಾಟಕ ರಾಜ್ಯ ಅರಣ್ಯ ಮತ್ತು ಕೆಲವು ಇತರ ಕಾನೂನುಗಳು (ತಿದ್ದುಪಡಿ) ವಿಧೇಯಕ, 1997ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ. ಹಾಗೂ ವಿಧಾನಸಭೆಯ ಸಹಮತಿಯನ್ನು ಕೋರುತ್ತೇನೆ.

ದಿನಾಂಕ: 12-9-97ರಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

''ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 11ನೇ ಸೆಪ್ಟೆಂಬರ್ 97ರಂದು ಕರ್ನಾಟಕ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕ 1997ನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ ಹಾಗೂ ಅದರ ವರದಿಯನ್ನು ಎರಡು ತಿಂಗಳೊಳಗಾಗಿ ಸದನಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಆದುದರಿಂದ ಸದರಿ ಸಮಿತಿಗೆ ವಿಧಾನಸಭೆಯ 14 ಸದಸ್ಯರನ್ನು ನೇಮಕ ಮಾಡಬೇಕೆಂದು ಹಾಗೂ ವಿಧಾನಸಭೆಯ ಸಹಮತಿಯನ್ನು ಒದಗಿಸಬೇಕೆಂದು ಕೋರಿರುತ್ತಾರೆ.''

ಈ ಸದನವು ವಿಧಾನಪರಿಷತ್ತಿನವರು ಕರ್ನಾಟಕ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕ 1997ನ್ನು ಜಂಟಿ ಪರಿಶೀಲನಾ ಸಮಿತಿಗೆ ವಹಿಸಿದ್ದು ಹಾಗೂ ಈ ಕೆಳಕಂಡ ವಿಧಾನಸಭೆಯ ಸದಸ್ಯರನ್ನು ಆ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿ ಸಹಮತಿಯನ್ನು ನೀಡಿದೆ:

ಶ್ರೀಯುತರುಗಳಾದ:

(1) ಎನ್.ರಾಜಣ್ಣ

(2) ಜೆ.ಬಿ.ಶಿವಕುಮಾರ್

(3) ಪಿ.ಸಿ.ಸಿದ್ಧನಗೌಡರ್

(4) ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ

(5) ಹೆಚ್.ಕೆ.ಕುಮಾರಸ್ವಾಮಿ

(6) ಅಮರ್‌ನಾಥ್ ಶೆಟ್ಟಿ

(7) ಬಿ.ಆರ್.ಯಾವಗಲ್

(8) ಕರಡಿ ಸಂಗಣ್ಣ

(9) ಡಾ॥ ಎಂ.ಪಿ.ಕರ್ಕಿ

(10) ಶ್ರೀಮತಿ ಎಸ್.ಪ್ರಮೀಳಾ

(11) ಕೆ.ಎಸ್.ಪುಟ್ಟಣ್ಣಯ್ಯ

(12) ಪ್ರಕಾಶ್ ಬಿ.ಹುಕ್ಕೇರಿ

(13) ಎ.ಟಿ.ರಾಮಸ್ವಾಮಿ

(14) ಡಿ.ಕೆ.ಶಿವಕುಮಾರ್.

(ii) ತೀರ್ಪು

ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ದಿನಾಂಕ 27-3-1997ರಂದು ನಿಯಮ 191ರ ಮೇರೆಗೆ ಬೆಂಗಳೂರು ದೂರದರ್ಶನದ ಕೇಂದ್ರದವರ ವಿರುದ್ಧ ಹಕ್ಕುಚ್ಯುತಿ ಸೂಚನೆಯನ್ನು ನೀಡಿದ್ದರು. ಸದರಿ ಸೂಚನೆಯಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರು 1997-98ನೇ ಸಾಲಿನ ಆಯವ್ಯಯವನ್ನು ದಿನಾಂಕ: 18-3-1997ರಂದು ವಿಧಾನಸಭೆಯಲ್ಲಿ ಮಂಡಿಸುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದವರು ವ್ಯಕ್ತಪಡಿಸುತ್ತಿದ್ದ ಪ್ರತಿಭಟನೆಯನ್ನು ಬೆಂಗಳೂರು ದೂರದರ್ಶನವರು ಕಡೆಗಣಿಸಿ ಕೇವಲ ಆಡಳಿತ ಪಕ್ಷದ ಕಡೆಗೆ ಮಾತ್ರ ಗಮನ ಕೊಟ್ಟಿದ್ದರಿಂದ ವಿರೋಧ ಪಕ್ಷದ ಸದಸ್ಯರ ಹಕ್ಕಿಗೆ ಚ್ಯುತಿ ಉಂಟಾಗಿರುವುದೆಂದು ಆಪಾದಿಸಿದ್ದರು.

1997-98ನೇ ಸಾಲಿನ ಆಯವ್ಯಯವನ್ನು ಮಾನ್ಯ ಉಪ ಮುಖ್ಯಮಂತ್ರಿಯವರು

ಮಂಡಿಸುವಂತಹ ಸನ್ನಿವೇಶವನ್ನು ಇದೇ ಪ್ರಥಮ ಬಾರಿಗೆ ಪ್ರಸಾರ ಮಾಡಲು ದೂರದರ್ಶನದವರಿಗೆ ಅನುಮತಿ ನೀಡಿಲಾಗಿತ್ತು. ಆಯವ್ಯಯದಲ್ಲಿನ ವಿಷಯಗಳು ಸಾರ್ವಜನಿಕರಿಗೆ ತಿಳಿಯಬೇಕೆಂಬ ಉದ್ದೇಶದಿಂದಾಗಿ ದೂರದರ್ಶನದವರು ಹೆಚ್ಚಾಗಿ ಉಪ ಮುಖ್ಯಮಂತ್ರಿಯವರನ್ನೇ ಕೇಂದ್ರೀಕರಿಸಿ ಪ್ರಸಾರ ಮಾಡಿರುತ್ತಾರೆ. ಹೀಗಾಗಿ ಬೆಂಗಳೂರು ದೂರದರ್ಶನದವರು ಸದನದ ಇತರ ಸದಸ್ಯರ ಕಡೆಗೆ ಬಹುಶಃ ಗಮನಹರಿಸಿರುವುದಿಲ್ಲ.

ಸದನದ ಕಾರ್ಯಕಲಾಪಗಳಲ್ಲಿ ಯಾವುದೇ ಸದಸ್ಯರು ಭಾಗವಹಿಸಿದಂಥ ಸಂದರ್ಭವನ್ನು ದೂರದರ್ಶನವಾಗಲಿ, ಆಕಾಶವಾಣಿಯಾಗಲಿ ಅಥವಾ ಇತರೆ ಪತ್ರಿಕಾ ಮಾಧ್ಯಮದವರಾಗಲೀ ಪ್ರಸಾರ ಮಾಡದೇ ಇರದಿದ್ದಲ್ಲಿ ಅದು ಹಕ್ಕುಚ್ಯುತಿ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕೋದಂಡರಾಮಯ್ಯನವರದ್ದು ಏನಾಯಿತು ಸ್ವಾಮಿ?

ಅಧ್ಯಕ್ಷರು: ಅದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅದನ್ನು ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಟೈಮ್ ಕೊಡಿ.

(11) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಆರನೇ ಮುಂದುವರೆದ ಉಪವೇಶನವು ಇಲ್ಲಿಯವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

ಸೋಮವಾರ, ದಿನಾಂಕ 28ನೇ ಜುಲೈ, 1997ರಂದು ಪ್ರಾರಂಭವಾದ ಆರನೇ ಮುಂದವರೆದ ಉಪವೇಶನವು 30 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿತು.

ಸದನವು 197.36 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಇತ್ತೀಚೆಗೆ ನಿಧನರಾದ 13 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 2242 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 345 ಚುಕ್ಕೆ ಗುರ್ತಿನ ಪ್ರಶ್ನೆಗಳಾಗಿ ಹಾಗೂ 1555 ಪ್ರಶ್ನೆಗಳು ಚುಕ್ಕೆ ರಹಿತ ಪ್ರಶ್ನೆಯಾಗಿಯೂ ಅಂಗೀಕಾರವಾಗಿರುತ್ತದೆ.

ಎರಡು ಅಲ್ಪ ಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ನೀಡಲಾಯಿತು.